ಆ) ಹಾಗಾದರೆ ಈ ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಕೆ.ಎಸ್. ಈಶ್ವರಪ್ಪ (ಇಂಧನ ಸಚಿವರು) :

ಅ) ಪ್ರಸ್ತುತ ಸರ್ವಜ್ಞನಗರ ವಿಧಾನ ಸಭಾ ಕ್ಷೇತ್ರದಲ್ಲಿ ಪರಿವರ್ತಕಗಳ ಕೊರತೆಯಿಂದಾಗಿ ಅಸಮರ್ಪಕ ವಿದ್ಯುತ್ ಸರಬರಾಜಾಗುತ್ತಿರುವುದಾಗಿ ದೂರುಗಳು ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

614 ಶ್ರೀ ಬಿ.ಸಿ.ಪಾಟೀಲ್ : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿರೇಕೆರೂರ ಪಟ್ಟಣದ ಸಹಕಾರಿ ವಿದ್ಯಾವರ್ಧಕ ಸಂಘದ (ಸಿ.ಇ.ಎಸ್.), ಶಾಲಾ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಹುದ್ದೆಗಳೆಷ್ಟು;

ಆ) ಈ ಸಂಸ್ಥೆಯ ಶಾಲಾ ಕಾಲೇಜುಗಳಲ್ಲಿ ತರಗತಿವಾರು ವಿದ್ಯಾರ್ಥಿಗಳ ಸಂಖ್ಯೆ ಎಷ್ಟು

ಇ) ಈ ಸಂಸ್ಥೆಯಲ್ಲಿ ಹೆಚ್ಚುವರಿಯಾಗಿ ಶಿಕ್ಷಕರು ಕಾರ್ಯನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ರಾಜ್ಯದಲ್ಲಿ ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಹೆಚ್ಚುವರಿಯಾಗಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆ ಎಷ್ಟು;

ಉ) ಇಂತಹ ಹೆಚ್ಚುವರಿ ಶಿಕ್ಷಕರ ಹುದ್ದೆ ಸ್ಥಳಾಂತರ ಕುರಿತು ಸರ್ಕಾರ ಯಾವ ಕ್ರಮ ಕೈಗೊಂಡಿದೆ.

ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಪ್ರಾಥಮಿಕ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿ – 17

ಪ್ರೌಢಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿ –50

ಪದವಿಪೂರ್ವ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿ –24

ಆ) ಸದರಿ ಸಂಸ್ಥೆಯ ವತಿಯಿಂದ ಒಂದು ಪ್ರಾಥಮಿಕ ಶಾಲೆ, 5 ಪ್ರೌಢಶಾಲೆಗಳು ಹಾಗೂ ಒಂದು ಪದವಿಪೂರ್ವ ಕಾಲೇಜು ನಡೆಯುತ್ತಿದ್ದು, ತರಗತಿವಾರು ವಿದ್ಯಾರ್ಥಿಗಳ ವಿವರ ಈ ಕೆಳಕಂಡಂತೆ ಇರುತ್ತದೆ.

ಪ್ರಾಥಮಿಕ ಶಾಲೆ

ಶಾಲೆಯ ಹೆಸರು	ತರಗತಿ	ದಾಖಲಾತಿ	ಹಾಜರಾತಿ
ಎಸ್.ಎನ್.ಕೆ.ಪ್ರಾ.ಶಾಲೆ, ಹಿರೇಕೆರೂರು.	1	40	35
	2	43	38
	3	64	63
	4	98	86
	5	86	80
	6	76	70
	7	100	96
	ಒಟ್ಟು	**507**	**468**

ಪ್ರೌಢಶಾಲೆಗಳು

ಶಾಲೆಗಳ ಹೆಸರು	ತರಗತಿ	ವಿದ್ಯಾರ್ಥಿಗಳ ಸಂಖ್ಯೆ	ಒಟ್ಟು
ಡಿ.ಆರ್.ಟಿ. ಬಾಲಕರ ಪ್ರೌಢಶಾಲೆ, ಹಿರೇಕೆರೂರು	8	75	324
	9	121	
	10	128	
ಸಿ.ಇ.ಎಸ್. ಹೆಣ್ಣುಮಕ್ಕಳ ಪ್ರೌಢಶಾಲೆ, ಹಿರೇಕೆರೂರು	8	64	248
	9	87	
	10	97	
ಶ್ರೀ ರೇಣುಕಾ ಪ್ರೌಢಶಾಲೆ, ಚಿಕ್ಕಕಬ್ಬಾರ	8	54	144
	9	51	
	10	39	
ಮಲ್ಲಿಕಾರ್ಜುನ ಪ್ರೌಢಶಾಲೆ,	8	40	

ಹೊಸಹಳ್ಳಿ	9	35	110
	10	35	
ಶ್ರೀ ಮಾರುತಿ ಪ್ರೌಢಶಾಲೆ, ಆಲದಗೇರಿ	8	39	157
	9	53	
	10	65	
		ಒಟ್ಟು	**983**

ಪದವಿಪೂರ್ವ ಕಾಲೇಜು :

ತರಗತಿ	ಕಲಾ	ವಾಣಿಜ್ಯ	ವಿಜ್ಞಾನ	ಒಟ್ಟು
ಪ್ರಥಮ ಪಿ.ಯು.ಸಿ.	456	44	191	691
ದ್ವಿತೀಯ ಪಿ.ಯು.ಸಿ.	333	56	196	585
ಒಟ್ಟು				**1276**

ಇ) ಪ್ರಾಥಮಿಕ ಶಾಲೆಗಳಲ್ಲಿ ಹೆಚ್ಚುವರಿ ಶಿಕ್ಷಕರು ಇರುವುದು ಸರ್ಕಾರದ ಗಮನಕ್ಕೆ ಬಂದಿದೆ. ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜುಗಳಲ್ಲಿ ಹೆಚ್ಚುವರಿ ಬೋಧಕ ಸಿಬ್ಬಂದಿ ಇರುವುದಿಲ್ಲ.

ಈ) ಪ್ರಾಥಮಿಕ ಶಾಲೆಗಳಲ್ಲಿನ ಹೆಚ್ಚುವರಿ ಶಿಕ್ಷಕರ ಸಂಖ್ಯೆ–80

ಉ) ಸರ್ಕಾರದ ಆದೇಶ ಸಂಖ್ಯೆ ಇಡಿ 111 ಪಿಎಂಸಿ 2006, ದಿ: 10–4–2007ರ ಅನ್ವಯ ಹೆಚ್ಚುವರಿ ಶಿಕ್ಷಕರನ್ನು ಕಾರ್ಯಭಾರವಿರುವ ಶಾಲೆಗಳಿಗೆ ಮರು ಹಂಚಿಕೆ ಮಾಡಿ ಕ್ರಮವಹಿಸಲಾಗುತ್ತಿದೆ.

500 ಡಾ: ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಖಾಸಗಿ ಅನುದಾನರಹಿತ ಪ್ರಾಥಮಿಕ ಶಾಲೆಗಳೆಷ್ಟು;

ಆ) ಈ ಶಾಲೆಗಳಲ್ಲಿ ಶಿಕ್ಷಣ ಗುಣಮಟ್ಟ ಕಾಯ್ದುಕೊಳ್ಳಲು ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ, ಈ ಶಾಲೆಗಳ ಮೇಲೆ ಸರ್ಕಾರ ಯಾವ ರೀತಿಯ ನಿಯಂತ್ರಣ ಹೊಂದಿದೆ;